**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ ಃ3469/2021**

**ಚಾಸಾ ಃ- 1 / ಪ್ರಾಸಾ ಃ- 1**

| | |
|---|---|
| ಹೆಸರು | **ಮಂಜುನಾಥ ಡಿ. ಎಸ್** |
| ತಂದೆಯ ಹೆಸರು | ಶಿವರಾಂ |
| ವಯಸ್ಸು | **28** |
| ಉದ್ಯೋಗ | **ಪೇದೆ** |
| ವಿಳಾಸ | **ತಾವರೆಕೆರೆ** |

**ದಿನಾಂಕಃ05-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

ನಾನು ದಿ.01-01-2021 ರಿಂದ ಇಲ್ಲಿಯವರೆಗೆ ತಾವರೆಕೆರೆ ಪೋಲೀಸ್ ಠಾಣೆಯಲ್ಲಿ ಪೇದೆಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕ 18-09-2021 ರಂದು ಚಾಸಾ-13 ರವರು ನನ್ನನ್ನು ರಾತ್ರಿ ವೇಳೆಯಲ್ಲಿ ಮಾಗಡಿ ಮುಖ್ಯ ರಸ್ತೆಯಲ್ಲಿ ಗಸ್ತು ಕರ್ತವ್ಯಕ್ಕೆ ನೇಮಕ ಮಾಡಿದ್ದರು. ಅದರಂತೆ ರಾತ್ರಿ 09.30 ಗಂಟೆಯ ಸಮಯದಲ್ಲಿ ಮಾಗಡಿ ಮುಖ್ಯ ರಸ್ತೆಯ ಪಂಚಮುಖಿ ದೇವಸ್ಥಾನದ ಹತ್ತಿರ ಕಾರ್ಯವನ್ನು ನಿರ್ವಹಿಸುತ್ತಿದ್ದಾಗ, ತಾವರೆಕೆರೆ ಕಡೆಯಿಂದ ಮಾಗಡಿ ಕಡೆಗೆ ಒಂದು ದ್ವಿಚಕ್ರ ವಾಹನ ಸಂ. ಕೆಎ-41-ಇಕೆ-8931 ರಲ್ಲಿ ಇಬ್ಬರು ಬರುತ್ತಿದ್ದರು. ಹಿಂಬದಿಯಲ್ಲಿ ಕುಳಿತ್ತಿದ್ದ ವ್ಯಕ್ತಿಯು ಜೋರಾಗಿ ಕೂಗಾಡಿಕೊಂಡು ಬರುತ್ತಿದ್ದರು. ಆಗ ನಾನು ಆ ವಾಹನವನ್ನು ತಡೆದು ನಿಲ್ಲಿಸಿ ಯಾಕೆ ಸಾರ್ವಜನಿಕರಿಗೆ ತೊಂದರೆಯನ್ನು ನೀಡುತ್ತೀಯಾ ಎಂದು ಪ್ರಶ್ನೆ ಮಾಡಿದೆನು. ಸಮವಸ್ತ್ರದಲ್ಲಿ ಇದ್ದ ನನಗೆ ಅವರು ಬಾಯಿಗೆ ಬಂದಂತೆ ಬೈದು ನೀನು ಯಾರು ನನ್ನನ್ನು ಪ್ರಶ್ನೆ ಮಾಡುತ್ತಿಯಾ ಎಂದು ನನ್ನನ್ನು ಕೇಳಿ ನನ್ನ ಸಮವಸ್ತ್ರವನ್ನು ಎಳೆದಾಡಿದರು.

ಆ ಸಮಯದಲ್ಲಿ ನಾನು ನನ್ನ ಮೊಬೈಲ್ ನಿಂದ ವಿಡಿಯೋ ಮಾಡಿಕೊಳ್ಳಲು ಹೋದಾಗ ಮೊಬೈಲ್ ನ್ನು ಕಿತ್ತು ನೆಲಕ್ಕೆ ಬಿಸಾಡಿದರು.

ಅಷ್ಟರಲ್ಲಿ ಚಾಸಾ-3 ಮತ್ತು 4 ರವರು ಸ್ಥ,ಳಕ್ಕೆ ಬಂದರು. ಅವರ ಸಹಾಯದಿಂದ ನಾನು ಸದರಿ ವ್ಯಕ್ತಿ ಮತ್ತು ವಾಹನವನ್ನು ಠಾಣೆಗೆ ಕರೆದುಕೊಂಡು ಹೋದೆನು. ನಾನು ಆ ವ್ಯಕ್ತಿಯನ್ನು ವಿಚಾರಿಸಿದಾಗ ಅವರು ತಾವರೆಕೆರೆಯ ಸಂಪಿಗೆ ರಸ್ತೆಯಲ್ಲಿ ಇರುವ ಕುವೆಂಪು ನಗರದ ಸಂತೋಷ್ ಬಿನ್ ಆಂಜನಪ್ಪ ಎಂದು ಹೇಳಿದರು. ನಡೆದ ಘಟನೆಯನ್ನು ನಾನು ರಾತ್ರಿ 10 ಗಂಟೆಯ ಸಮಯದಲ್ಲಿ ಚಾಸಾ-13 ರವರಿಗೆ ತಿಳಿಸಿ, ದೂರನ್ನು ನೀಡಿದೆನು. ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯದ ಮುಂದೆ ಆರೋಪಿಯು ಹಾಜರಿದ್ದಾರೆ. ಈಗ ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿದ್ದು, ಅದೇ ವಾಹನದಲ್ಲಿ ಆರೋಪಿಯು ಕೂಗಿಕೊಂಡು ಹೋಗುತ್ತಿದ್ದರು. ಸದರಿ ಫೋಟೋವನ್ನು ನಿಪಿ-2 ಎಂದು ಗುರುತಿಸಲಾಯಿತು.

ಸದರಿ ಕೃತ್ಯದಿಂದ ನನಗೆ ಮೂಗೇಟು ಆಗಿತ್ತು ಆಗಾಗಿ ನಾನು ತಾವರೆಕೆರೆಯ ಅಮ್ಮಾ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡೆನು. ನಂತರ ನಾನು ಠಾಣೆಗೆ ಹೋದಾಗ ಚಾಸಾ-14 ರವರು ಕೃತ್ಯಕ್ಕೆ ಬಳಸಿದ್ದ ವಾಹನ ಮತ್ತು ನನ್ನ ಮೊಬೈಲ್ ನ್ನು ಪಂಚನಾಮೆ ಮಾಡಿ ವಶಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಅದರಂತೆ ಚಾಸಾ-7 ಮತ್ತು 8 ರವರಿಗೆ ನೋಟಿಸ್ ನ್ನು ನೀಡಿ ಪಂಚನಾಮೆಗೆ ಸಹಕರಿಸುವಂತೆ ತಿಳಿಸಿದೆವು. ನಂತರ ರಾತ್ರಿ 11 ರಿಂದ 11.45 ರ ಸಮಯದಲ್ಲಿ ಠಾಣೆಯ ಆವರಣದಲ್ಲಿ ಇದ್ದ ಈ ಮೇಲೆ ಹೇಳಿರುವ ದ್ವಿ ಚಕ್ರ ವಾಹನ ಮತ್ತು ಮೊಬೈಲ್ ನ್ನು ಪಂಚನಾಮೆ ಮಾಡಿ ವಶಪಡಿಸಿಕೊಂಡರು. ಈಗ ಸಾಕ್ಷಿಗೆ ಅಮಾನತ್ತು ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಅಮಾನತ್ತು ಪಂಚನಾಮೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಕೃತ್ಯ ನಡೆದ ಸ್ಥಳ ಪಂಚನಾಮೆಗೆ ಸಹಕರಿಸುವಂತೆ ಹೇಳಿ ಚಾಸಾ-5 ಮತ್ತು 6 ರವರಿಗೆ ನೋಟಿಸ್ ನ್ನು ನೀಡಲಾಯಿತು. ಅದರಂತೆ ದಿ.19-09-2021 ರಂದು ಬೆಳಗ್ಗೆ 8 ರಿಂದ 8.45 ರ ಸಮಯದಲ್ಲಿ ನಾನು ತೋರಿಸಿದ ಜಾಗದಲ್ಲಿ ಚಾಸಾ-5 ಮತ್ತು 6 ರವರ ಸಮಕ್ಷಮದಲ್ಲಿ ಸ್ಥಳ ಪಂಚನಾಮೆಯನ್ನು ಮಾಡಲಾಯಿತು. ಈಗ ಸಾಕ್ಷಿಗೆ ಪಂಚನಾಮೆಯನ್ನು ತೋರಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆಯನ್ನು ಮಾಡಿದ ನಂತರ ಪ್ರಿಂಟರ್ ಮೂಲಕ ಹನುಮಂತರಾಯಪ್ಪನವರು ಪಂಚನಾಮೆಯನ್ನು ಸ್ಥಳದಲ್ಲಿಯೇ ಪ್ರಿಂಟ್ ತೆಗೆದರು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಫೋಟೋವನ್ನು ತೆಗೆಯಲಾಗಿದೆ. ಈಗ ಸಾಕ್ಷಿಗೆ ಫೋಟೋವನ್ನು ತೋರಿಸಿದ್ದು, ಅದನ್ನು ಸ್ಥಳ ಪಂಚನಾಮೆ ಮಾಡುವ ಸಮಯದಲ್ಲಿ ತೆಗೆಯಲಾಗಿದೆ. ಸದರಿ ಫೋಟೋವನ್ನು ನಿಪಿ-5 ಎಂದು ಗುರುತಿಸಲಾಯಿತು.

ದಿ.05-10-2021 ರಂದು ನನ್ನ ಮೊಬೈಲ್ ನ್ನು ಇಂಡೆಮ್ನಿಟಿ ಬಾಂಡ್ ಮೂಲಕ ಬಿಡುಗಡೆ ಮಾಡಿಕೊಂಡಿರುತ್ತೇನೆ. ಈಗ ಸಾಕ್ಷಿಗೆ ಇಂಡೆಮ್ನಿಟಿ ಬಾಂಡ್ ನ್ನು ತೋರಿಸಿದ್ದು, ಅದರಲ್ಲಿ ಇರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಇಂಡೆಮ್ನಿಟಿ ಬಾಂಡ್ ನ್ನು ನಿಪಿ-6, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿದ್ದು, ಅದನ್ನು ನಿಪಿ-6 ರಂತೆ ನನ್ನ ಮೊಬೈಲ್ ನ್ನು ಬಿಡಿಸಿಕೊಳ್ಳುವ ಸಮಯದಲ್ಲಿ ತೆಗೆಯಲಾಗಿದೆ. ಸದರಿ ಫೋಟೋಗಳನ್ನು ನಿಪಿ-7 ಎಂದು ಗುರುತಿಸಲಾಯಿತು.

**ಪಾಟೀ ಸವಾಲು :- ಆರೋಪಿಯ ಪರ ಶ್ರೀ. ಜಿ. ಹೆಚ್. ಎಂ, ವಕೀಲರಿಂದ :-**

**1.** ದಿ.18-09-2021 ರಂದು ರಾತ್ರಿ 10 ಗಂಟೆ ಸಮಯದಲ್ಲಿ ನಾನು ನಿಪಿ-1 ರಂತೆ ದೂರನ್ನು ನೀಡಿದ್ದೇನು. ನಿಪಿ-1 ನ್ನು ನಾನೇ ಠಾಣೆಯಲ್ಲಿ ಬೆರಳಚ್ಚು ಮಾಡಿರುತ್ತೇನೆ. ಘಟನೆ ನಡೆದ ಸಮಯದಲ್ಲಿ ಯಾವುದೇ ಸಾರ್ವಜನಿಕರು ಇರುವುದಿಲ್ಲ. ಆರೋಪಿಯ ಜೊತೆಯಲ್ಲಿ ವಾಹನ ಚಾಲನೆ ಮಾಡುತ್ತಿದ್ದ ವ್ಯಕ್ತಿಯ ಹೆಸರು ಮತ್ತು ವಿಳಾಸ ನನಗೆ ಗೊತ್ತಿಲ್ಲ. ನಿಪಿ-1 ರಂತೆ ದೂರನ್ನು ದಾಖಲಿಸಿದ ನಂತರವೂ ಸಹ ನಾನು ಸದರಿ ವ್ಯಕ್ತಿಯ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಿರುವುದಿಲ್ಲ. 9.30 ರಿಂದ 9.45 ರವರೆಗೆ ಘಟನೆಯು ನಡೆದಿರುತ್ತದೆ ಮತ್ತು ಸದರಿ ವಿಷಯವನ್ನು ನಾನು ನಿಪಿ-1 ರಲ್ಲಿ ಹೇಳಿರುವುದಿಲ್ಲ. ಘಟನೆ ನಡೆಯಿತು ಎಂದು ಹೇಳುವ ಜಾಗವು ಮಾಗಡಿ- ಬೆಂಗಳೂರು ಮುಖ್ಯ ರಸ್ತೆ ಆಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಸ್ಥಳದಲ್ಲಿ ಸಾರ್ವಜನಿಕರು ಯಾವಾಗಲೂ ಓಡಾಡುತ್ತಾರೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಘಟನೆ ನಡೆದ ಸಮಯದಲ್ಲಿ ನಮ್ಮನ್ನು ಕಾಪಾಡಲು ಯಾವುದೇ ಸಾರ್ವಜನಿಕರು ಬಂದಿರುವುದಿಲ್ಲ.

2. ಪ್ರತಿದಿನ ರಾತ್ರಿ 8 ಗಂಟೆಯಿಂದ ಬೆಳಗ್ಗೆ 5 ಗಂಟೆಯವರೆಗೆ ಆ ಸಮಯದಲ್ಲಿ ಗಸ್ತು ಮಾಡುವ ಸಲುವಾಗಿ ನೇಮಕ ಮಾಡಿದರು. ನನ್ನನ್ನು ಮಾಗಡಿ ಬೆಂಗಳೂರು ಮುಖ್ಯ ರಸ್ತೆಯಲ್ಲಿ ಗಸ್ತು ಮಾಡಲು ನೇಮಕ ಮಾಡಿದರು ಮತ್ತು ಸದರಿ ವಿಷಯವನ್ನು ನಾನು ನಿಪಿ-1 ರಲ್ಲಿ ಹೇಳಿರುತ್ತೇನೆ. ನಾನು ಗಸ್ತನ್ನು ನನ್ನ ಸ್ವಂತ ವಾಹನದಲ್ಲಿ ಮಾಡುತ್ತಿದ್ದೇನೆ. ನನ್ನ ವಾಹನವು ಪಲ್ಸರ್ ದ್ವಿಚಕ್ರ ಸಂ.ಕೆಎ-02-ಕೆಹೆಚ್-7017 ಆಗಿದೆ. ನಾನು ನಿಪಿ-1 ರಲ್ಲಿ ಈ ಮೇಲೆ ಹೇಳಿರುವ ವಾಹನದಲ್ಲಿ ಗಸ್ತನ್ನು ಮಾಡುತ್ತಿದ್ದೆ ಎಂದು ಹೇಳಿರುವುದಿಲ್ಲ. ಸದರಿ ವಿಷಯವನ್ನು ನಿಪಿ-1 ರಲ್ಲಿ ಹೇಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿಪಿ-1 ರಲ್ಲಿ ನಮೂದಿಸಿರುವ ದ್ವಿಚಕ್ರ ವಾಹನವು ಯಾರ ಮಾಲೀಕತ್ವಕ್ಕೆ ಸೇರಿದ

ಎಂದು ನಾನು ತಿಳಿದುಕೊಂಡಿರುವುದಿಲ್ಲ. ದ್ವಿ ಚಕ್ರ ವಾಹನ ಚಾಲನೆ ಮಾಡುತ್ತಿದ್ದ ವ್ಯಕ್ತಿಯ ವಿರುದ್ದ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ.

3. ಘಟನೆ ನಡೆದ ಸಮಯದಲ್ಲಿ ಆರೋಪಿಯು ಮದ್ಯ ಪಾನ ಮಾಡಿದ್ದರಾ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಕೃತ್ಯ ನಡೆದ ಸಮಯದಲ್ಲಿ ನನ್ನ ಸಮವಸ್ತ್ರವು ಹರಿದು ಹೋಗಿರುವುದಿಲ್ಲ. ನಾನು ರೆಡ್ ಮೀ ನೋಟ್-7 ಪ್ರೊ ಮೊಬೈಲ್ ನಲ್ಲಿ ವಿಡಿಯೋವನ್ನು ಮಾಡಲು ಪ್ರಯತ್ನಿಸಿದಾಗ, ಆರೋಪಿಯು ಮೊಬೈಲ್ ನ್ನು ಕಿತ್ತುಕೊಂಡರು. ನಿಪಿ-1 ರಲ್ಲಿ ಯಾವ ಕಂಪನಿಯ ಮೊಬೈಲ್ ಎಂದು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನನ್ನ ಮೊಬೈಲ್ ಎಷ್ಟು ಬೆಲೆ ಬಾಳುತ್ತದೆ ಎಂದು ತೋರಿಸಲು ಮತ್ತು ಮೊಬೈಲ್ ಖರೀದಿ ಮಾಡಿರುವ ರಸೀತಿಯನ್ನು ಠಾಣೆಗೆ ನೀಡಿರುವುದಿಲ್ಲ. ಆರೋಪಿಯು ನನ್ನ ಮೊಬೈಲನ್ನು ಹೊಡೆದು ಹಾಕಿದಾಗ ಅದು ಜಖಂ ಗೊಂಡಿರುತ್ತದೆ ಆದರೆ ಯಾವುದೇ ಪುಡಿಯಾಗಿರುವುದಿಲ್ಲ. ನಿಪಿ-6 ರಂತೆ ನಾನು ಮೊಬೈಲ್ ನ್ನು ಬಿಡಿಸಿಕೊಂಡ ನಂತರ ಅದನ್ನು ಉಪಯೋಗಿಸುತ್ತಿಲ್ಲ. ಆರೋಪಿಯು ನಿಮ್ಮ ಮೊಬೈಲ್ ನ್ನು ಹೊಡೆದು ಹಾಕಿಲ್ಲದೇ ಇರುವ ಕಾರಣ ಅದನ್ನು ಸರಿಪಡಿಸಿಕೊಂಡಿರುವ ವಿಷಯಕ್ಕೆ ಸಂಬಂಧಿಸಿದಂತೆ ನೀವು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಮೊಬೈಲ್ ನ್ನು ಸರಿಪಡಿಸಿಕೊಳ್ಳಲು 5 ರಿಂದ 10 ಸಾವಿರ ಖರ್ಚು ಆಗುತ್ತದೆ ಎಂದು ಹೇಳಿದ ಕಾರಣ ತಾನು ಮೊಬೈಲ್ ಸರಿ ಪಡಿಸಿಕೊಂಡಿರುವುದಿಲ್ಲ ಎಂದು ಹೇಳುತ್ತಾರೆ.

4. ಚಾಸಾ-3 ಮತ್ತು 4 ರವರಿಗೆ ಕೃತ್ಯ ನಡೆದ ಸ್ಥಳಕ್ಕೆ ಬರುವಂತೆ ಯಾರು ಹೇಳಿದರು ಎಂದು ನನಗೆ ಗೊತ್ತಿಲ್ಲ. ಆರೋಪಿಯು ನನ್ನ ಮೊಬೈಲನ್ನು ಹೊಡೆದ ಹಾಕಿದ ನಂತರ ನಾನೇ ಠಾಣೆಗೆ ಹಾಜರುಪಡಿಸುತ್ತೇನೆ. ಚಾಸಾ-3 ಮತ್ತು 4 ರವರು 9.45 ರ ಸಮಯದಲ್ಲಿ ಸ್ಥಳಕ್ಕೆ ಬಂದರು. ಚಾಸಾ-3 ಮತ್ತು 4 ರವರ

ಸಹಾಯದಿಂದಲೇ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದೆನು. ಕೃತ್ಯ ನಡೆದ ಸ್ಥಳದಿಂದ ಠಾಣೆಗೆ ಸುಮಾರು 300 ರಿಂದ 400 ಮೀಟರ್ ನಷ್ಟು ಅಂತವಿದೆ. ನಾನು 10 ಗಂಟೆಯ ಸಮಯದಲ್ಲಿ ದೂರನ್ನು ನೀಡಿದ ನಂತರ 10.15 ರ ಸಮಯದಲ್ಲಿ ತಾವರೆಕೆರೆಯ ಅಮ್ಮಾ ಆಸ್ಪತ್ರೆಗೆ ಹೋಗಿರುತ್ತೇನೆ. ಠಾಣೆಯ ಎದುರುಗಡೆ ತಾವರೆಕೆರೆ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳಲು ಯಾವುದೇ ಪ್ರಯತ್ನ ಮಾಡಿರುವುದಿಲ್ಲ.

5. ಆರೋಪಿಯ ನಿಮಗೆ ಎಲ್ಲಿ ಹಲ್ಲೆಯನ್ನು ಮಾಡಿದರು ಎಂದರೆ ಸಾಕ್ಷಿಯು ಆರೋಪಿಯು ಬಟ್ಟೆಯನ್ನು ಹಿಡಿದು ತನ್ನನ್ನು ತಳ್ಳಿದರು ಎನ್ನುತ್ತಾರೆ. ಸದರಿ ವಿಷಯವನು ನಾನು ನಿಪಿ-1 ರಲ್ಲಿ ಹೇಳಿರುತ್ತೇನೆ. ನಾನು ಅಮ್ಮಾ ಆಸ್ಪತ್ರೆಗೆ 10.15 ರ ಸಮಯದಲ್ಲಿ ಹೋಗಿ 10 ರಿಂದ 15 ನಿಮಿಷಗಳ ಕಾಲ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಕೃತ್ಯದಿಂದ ನನಗೆ ಯಾವುದೇ ರಕ್ತಗಾಯ ಆಗಿರುವುದಿಲ್ಲ. ಆರೋಪಿಯು ನಿಮಗೆ ಯಾವುದೇ ಹಲ್ಲೆಯನ್ನು ಮಾಡಿರುವುದಿಲ್ಲ ಮತ್ತು ನೀವು ಯಾವುದೇ ಚಿಕಿತ್ಸೆಯನ್ನು ಪಡೆದುಕೊಳ್ಳದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-4 ಕ್ಕೆ ಚಾಸಾ-5 ಮತ್ತು 6 ರವರು ಪಂಚರಾಗಿರುತ್ತಾರೆ. ನಿಪಿ-4 ರಂತೆ ಪಂಚನಾಮೆಗೆ ಹಾಜರಾಗುವಂತೆ ಹೇಳಿ ಪೋಲೀಸರು ನನಗೆ ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ. ನಿಪಿ-4 ರಂತೆ ಬೆಳಗ್ಗೆ 8 ರಿಂದ 8.45 ರವರೆಗೆ ಪಂಚನಾಮೆಯನ್ನು ಮಾಡಲಾಯಿತು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಸಾರ್ವಜನಿಕರು ಇದ್ದರು. ಅವರ ಹೆಸರು ಮತ್ತು ವಿಳಾಸ ನನಗೆ ಗೊತ್ತಿಲ್ಲ. ನಿಪಿ-4 ರಂತೆ ಪಂಚನಾಮೆಯನ್ನು ಚಾಸಾ-14 ರವರು ಮಾಡಿದರು. ನಿಪಿ-4 ನ್ನು ಮುಖ್ಯ ಪೇದೆಯಾದ ಹನುಮಂತರಾಜುರವರು ಬೆರಳಚ್ಚು ಮಾಡಿದರು. ನಿಪಿ-4 ರಂತೆ ಪಂಚನಾಮೆಯನ್ನು ಮಾಡುವ ಸಮಯದಲ್ಲಿ

ಪೋಲೀಸರು ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ. ನಿಪಿ-4 ಕ್ಕೆ ನಾನು, ಹನುಮಂತರಾಜು, ಚಾಸಾ-5, 6 ಮತ್ತು 14 ರವರು ಸಹಿಯನ್ನು ಮಾಡಿರುತ್ತೇವೆ. ಪಂಚನಾಮೆ ಮಾಡಿರುವ ಸ್ಥಳದ ಚೆಕ್ಕುಬಂಧಿ ನನಗೆ ಗೊತ್ತು. ಪೂರ್ವಕ್ಕೆ ಮಾಗಡಿ-ಬೆಂಗಳೂರು ಮುಖ್ಯ ರಸ್ತೆ, ಪಶ್ಚಿಮಕ್ಕೆ ಪಂಚಮುಖಿ ದೇವಸ್ಥಾನ, ಉತ್ತರಕ್ಕೆ ಅನಂತ್ ಮೋಟಾರ್ಸ್ ?ಮುತ್ತು ದಕ್ಷಿಣಕ್ಕೆ ಕಿರಣ್ ಟಿ. ವಿ. ಎಸ್ ಮೋಟಾರ್ಸ್ ಇದೆ. ನಿಪಿ-4 ಕ್ಕೆ ನಾನು ಕೃತ್ಯ ನಡೆದ ಸ್ಥಳದಲ್ಲಿ ನನ್ನ ಸಹಿಯನ್ನು ಮಾಡಿರುತ್ತೇನೆ. ಚಾಸಾ-5 ಮತ್ತು 6 ರವರಿಗೆ ಸ್ಥಳದಲ್ಲಿಯೇ ನೋಟಿಸ್ ನ್ನು ನೀಡಿರುತ್ತೇನೆ. ನಿಪಿ-4 ನ್ನು ಸ್ಥಳದಲ್ಲಿ ಪ್ರಿಂಟ್ ಮಾಡಲಾಗಿದೆ.

6. ನಿಪಿ-3 ರಂತೆ ದಿ.18-09-2021 ರಂದು ರಾತ್ರಿ 11 ರಿಂದ 11.45 ರ ಸಮಯದಲ್ಲಿ ಠಾಣಾ ಆವರಣದಲ್ಲಿ ಅಮಾನತ್ತು ಪಂಚನಾಮೆಯನ್ನು ಮಾಡಲಾಯಿತು. ನಿಪಿ-3 ರಂತೆ ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಆರೋಪಿಯು ಹೋಗುತ್ತಿದ್ದ ವಾಹನ ಮತ್ತು ನನ್ನ ಮೊಬೈಲನ್ನು ಅಮಾನತ್ತು ಮಾಡಲಾಯಿತು. ನಿಪಿ-3 ರಂತೆ ಪಂಚನಾಮೆಯನ್ನು ಮಾಡುವ ಮೊದಲು ಪಂಚರಿಗೆ ನೋಟಿಸ್ ನ್ನು ನೀಡಿ ಅವರನ್ನು ಸ್ಥಳಕ್ಕೆ ಬರಮಾಡಿಕೊಂಡು ಪಂಚನಾಮೆಯನ್ನು ಮಾಡಲಾಯಿತು. ನಿಪಿ-3 ನ್ನು ಚಾಸಾ-14 ರವರು ಮಾಡಿದರು. ನಿಪಿ-3 ರಲ್ಲಿ ನನ್ನ ಮೊಬೈಲ್ ಹೊಡೆದು ಹಾಕಿರುವುದರಿಂದ ಎಷ್ಟು ನಷ್ಟ ಉಂಟಾಗಿದೆ ಎಂದು ನಮೂದಿಸಲಾಗಿದೆ. ನಿಪಿ-1 ಮತ್ತು 3 ರಲ್ಲಿ ನಾನು ನನ್ನ ಮೊಬೈಲ್ ಎಷ್ಟು ಬೆಲೆ ಬಾಳುತ್ತದೆ ಎಂದು ಹೇಳಿರುವುದಿಲ್ಲ. ನಿಪಿ-3 ರಂತೆ ಪಂಚರ ಸಮಕ್ಷಮದಲ್ಲಿ ಪಂಚನಾಮೆಯನ್ನು ಮಾಡಿರುವುದಿಲ್ಲ ಮತ್ತು ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-3 ರಂತೆ ಪಂಚನಾಮೆ ಮಾಡಿರುವ ಸ್ಥಳದ ಚೆಕ್ಕುಬಂಧಿ ನನಗೆ ಗೊತ್ತು. ಪೂರ್ವ, ಪಶ್ಚಿಮ ಮತ್ತು ಉತ್ತರಕ್ಕೆ ಠಾಣಾ ಆವರಣದ ಕಾಂಪೌಂಡ್ ಇದೆ ಮತ್ತು ದಕ್ಷಿಣಕ್ಕೆ ಠಾಣಾ ಆವರಣದ

ಕಾಂಪೌಂಡ್ ಮತ್ತು ಆದಾದ ನಂತರ ಮಾಗಡಿ- ಬೆಂಗಳೂರು ಮುಖ್ಯ ರಸ್ತೆ ಇದೆ. ಆರೋಪಿಯು ಬರುತ್ತಿದ್ದ ಗಾಡಿಯು ಕೆಂಪು ಬಣ್ಣದ ಹೋಂಡಾ ಆಕ್ಟಿವಾ ಆಗಿದೆ ಮತ್ತು ಅದನ್ನು ನಿಪಿ-3 ರಲ್ಲಿ ನಮೂದಿಸಲಾಗಿದೆ. ನಿಪಿ-3 ಕ್ಕೆ ಚಾಸಾ-7 ಮತ್ತು 8 ರವರು ಸಾಕ್ಷಿದಾರರಾಗಿರುತ್ತಾರೆ. ಅವರ ವಿಳಾಸ ನನಗೆ ಗೊತ್ತಿರುವುದಿಲ್ಲ. ಆರೋಪಿಯು ನಿಮ್ಮ ಮೇಲೆ ಹಲ್ಲೆಯನ್ನು ಮಾಡಿ ನಿಮ್ಮ ಕರ್ತವ್ಯಕ್ಕೆ ಅಡ್ಡಿಯನ್ನು ಉಂಟು ಮಾಡಿರುವುದಿಲ್ಲ ಮತ್ತು ಈ ಪ್ರಕರಣಕ್ಕಾಗಿ ನೀವು ಸುಳ್ಳು ಗಾಯದ ಪ್ರಮಾಣಪತ್ರವನ್ನು ಸೃಷ್ಟಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಆರೋಪಿಯು ನಿಮಗೆ ಬಾಯಿಗೆ ಬಂದಂತೆ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಮತ್ತು ನಿಮ್ಮ ಮೊಬೈಲ್ ನ್ನು ಹೊಡಿದು ಹಾಕಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಆರೋಪಿಯ ವಿರುದ್ದ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯಾ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 670/2020**

**ಚಾಸಾ :- 24 / ಪ್ರಾಸಾ :- 11**

| | |
|---|---|
| ಹೆಸರು | **ಎಲ್ ಓಸ್ ಮಂಜುನಾಥ** |
| ತಂದೆಯ ಹೆಸರು | ಎಲ್ ಸಿ ಶಿವರುದ್ರಯ್ಯ |
| ವಯಸ್ಸು | **53** |
| ಉದ್ಯೋಗ | **ಎ ಎಸ್ ಐ** |
| ವಿಳಾಸ | **ಬೆಂಗಳೂರು** |

**ದಿನಾಂಕ:20-06-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ನಾನು 2014 ರಿಂದ 2021 ವರೆಗೆ ತಾವರೆಕೆರೆ ಪೋಲೀಸ್ ಠಾಣೆ ಮುಖ್ಯ ಪೇದೆಯಾಗಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕ 26.03.2019 ರಂದು ಬೆಳಗ್ಗೆ 11.00 ಗಂಟೆಯ ಸಮಯದಲ್ಲಿ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ನೀಡಿದ ಮೇರೆಗೆ ಠಾಣಾ ಮೊಕದ್ದಮೆ ನಂ.103/2019 ಎಂದು ನಮೂದಿಸಲಾಯಿತು. ಸದರಿ ಮೊಕದ್ದಮೆ ನಂ. ಕಲಂ 279, 337, 304-ಎ ಐಪಿಸಿ ಯ ರೀತ್ಯ ಪ್ರಕರಣ ದಾಖಲು ಮಾಡಲಾಯಿತು. ಈಗ ಸಾಕ್ಷಿಗೆ ನಿಪಿ-7 ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ಸದರಿ ದೂರಿನ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ಮಾಡಲಾಯಿತು. ಈಗ ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-28 ಸಾಕ್ಷಿಯ ಸಹಿಯನ್ನು ನಿಪಿ-28(ಎ) ಎಂದು ಗುರುತಿಸಲಾಯಿತು.

ದಿನಾಂಕ 26.03.2019 ರಂದು ಅಪಘಾತ ನಡೆದ ಸ್ಥಳದಲ್ಲಿ ನಿಪಿ-8 ರಂತೆ ಪಂಚನಾಮೆಯನ್ನು ಪ್ರಾಸಾ-2, 9 ಮತ್ತು ಚಾಸಾ-11 ರವರ ಸಮಕ್ಷಮದಲ್ಲಿ

ಮಾಡಲಾಯಿತು. ಈಗ ನನಗೆ ನಿಪಿ-8 ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿರುತ್ತಾರೆ. ಅದನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಕಚ್ಚಾ ನಕ್ಷೆಯನ್ನು ತಯಾರು ಮಾಡಿರುತ್ತೇವೆ. ಈಗ ಸಾಕ್ಷಿಗೆ ಕಚ್ಚಾ ನಕ್ಷೆಯನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಕಚ್ಚಾ ನಕ್ಷೆಯನ್ನು ನಿಪಿ-29 ಎಂದು ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ಮಾಡುವ ಸಮಯದಲ್ಲಿ 3 ವಾಹನಗಳನ್ನು ವಶಪಡಿಸಿಕೊಂಡಿರುತ್ತೇವೆ. ಸದರಿ ವಾಹನಗಳು ಮಾರುತಿ 800 ಸಂಖ್ಯೆ ಕೆಎ-02-ಎಂಎ-6891 , ಫಾರ್ಚುನರ್ ಸಂಖ್ಯೆ ಕೆಎ 56-ಎನ್ 5555 ಮತ್ತು ಐ-20 ಕಾರ್ ಸಂಖ್ಯೆ ಕೆಎ 43 ಎಂ-3709 ಆಗಿದೆ. ಈಗ ಸಾಕ್ಷಿಗೆ ನಿಪಿ-1 ರಿಂದ 6 ಅನ್ನು ತೋರಿಸಿದ್ದು , ಸದರಿ ವಾಹನಗಳನ್ನು ಪಂಚನಾಮೆ ಮಾಡುವ ಸಮಯದಲ್ಲಿ ವಶಪಡಿಸಿಕೊಂಡಿರುತ್ತೇವೆ. ಅಮಾನತು ಮಾಡಿದ ವಾಹನಗಳನ್ನು ಮಾಲು ಪಟ್ಟಿ ಸಂಖ್ಯೆ 73/2019 ರಲ್ಲಿ ದಾಖಲಿಸಲಾಯಿತು. ಈಗ ಸಾಕ್ಷಿಗೆ ಮಾಲುಪಟ್ಟಿಯನ್ನು ತೋರಿಸಿದ್ದು , ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಮಾಲುಪಟ್ಟಿಯನ್ನು ನಿಪಿ-30, ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗುರುತಿಸಲಾಯಿತು. ನಂತರ ಹೆಚ್ಚಿನ ತನಿಖೆಗೆ ಕಡತವನ್ನು ಚಾಸಾ-25 ರವರಿಗೆ ವರ್ಗಾವಣೆ ಮಾಡಲಾಯಿತು.

**ಪಾಟೀ ಸವಾಲು :- ಆರೋಪಿ ಪರ ಶ್ರೀ. ಸಿ ಕೆ ಆರ್ , ವಕೀಲರಿಂದ :-**

ನಾನು ಅಪಘಾತ ನಡೆದ ಸ್ಥಳವನ್ನು ಖುದ್ದಾಗಿ ನೋಡಿರುತ್ತೇನೆ. ಸದರಿ ಸ್ಥಳವು ಮಾಗಡಿ ಕಡೆಯಿಂದ ತಾವರೆಕೆರೆ ಕಡೆಗೆ ಇಳಿಜಾರಿನಿಂದ ಕೂಡಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅಪಘಾತ ನಡೆದ ಸಮಯದಲ್ಲಿ ಸದರಿ ಜಾಗದಲ್ಲಿ ಯಾವುದೇ ಡಿವೈಡರ್ ಇರಲಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಅಪಘಾತ ನಡೆದ ಸಮಯದಲ್ಲಿ ರಸ್ತೆಯ ಕಾಮಗಾರಿ ನಡೆಯುತ್ತಿತ್ತು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಪಿ-08 ರಂತೆ ಪಂಚನಾಮೆ ಮಾಡಲು ಸಹಕರಿಸುವಂತೆ ಹೇಳಿ ನಾನು ಪಂಚರಿಗೆ ಲಿಖಿತವಾಗಿ ನೋಟೀಸನ್ನು ನೀಡಿರುವುದಿಲ್ಲ, ಆದರೆ ಮೌಖಿಕವಾಗಿ ಹೇಳಿರುತ್ತೇನೆ. ಚಾಸಾ-11 ರವರು

ಬೈಚಗುಪ್ಪೆ ಗ್ರಾಮದವರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಅಪಘಾತ ನಡೆದ ಸ್ಥಳಕ್ಕೆ ಹೋಗಿಲ್ಲ , ನಿನಿಪಿ-8 ರಂತೆ ಪಂಚನಾಮೆಯನ್ನು ಮಾಡಿಲ್ಲ ಮತ್ತು ನಿಪಿ-8 ಅನ್ನು ಠಾಣೆಯಲ್ಲಿಯೇ ತಯಾರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಮೃತ ಕುಟುಂಬದವರಿಗೆ ಪರಿಹಾರ ಬರಬೇಕು ಎಂಬ ಉದ್ದೇಶದಿಂದ ಪ್ರಾಸಾ-2 ರವರಿಂದ ಸುಳ್ಳು ದೂರನ್ನು ಪಡೆದು ಸುಳ್ಳು ಎಫ್ ?ಐ ಆರ್ ನ್ನು ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ,**
**ಮಾಗಡಿ**

ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದು, ಸೂಕ್ತ ಕಾರಣವನ್ನು ನೀಡದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.